# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ : 163-2014

**ಪಿಡಬ್ಲ್ಯೂ : 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ : 14-09-2017 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಸ್.ಎಸ್.ಪಿ ವಕೀಲರಿಂದ :

ನನ್ನ ತಂದೆಯ ತಂದೆಯ ಹೆಸರು ಬಸಪ್ಪ. ನನ್ನ ಅಜ್ಜಿಯ ಹೆಸರು ನೀಲಮ್ಮ. ಅವರಿಗೆ ಇಬ್ಬರು ಮಕ್ಕಳಿರುತ್ತಾರೆ. ಅವರು ಜಂಭಣ್ಣ ಮತ್ತು ಪುಟ್ಟಪ್ಪ ಆಗಿರುತ್ತಾರೆ. ನನ್ನ ಅಜ್ಜ ಬಸಪ್ಪನಿಗೆ ಒಟ್ಟು 14 ಎಕರೆ, 3 ಎಕರೆ ಹಾಗೂ 2 ಎಕರೆ ಜಮೀನು ಇತ್ತು. ಪುಟ್ಟಪ್ಪನಿಗೆ ಎಷ್ಟು ಜಮೀನು ಇತ್ತು ಅಂದರೆ ಅವರು ದತ್ತು ಹೋಗಿರುತ್ತಾರೆ. ನನ್ನ ಅಜ್ಜನ ಬಳಿಯಲ್ಲಿರುವ ಈ ಮೇಲ್ಕಂಡ ಜಮೀನುಗಳು ಮೈಲಾರ ಗ್ರಾಮಕ್ಕೆ ಸೇರಿದ್ದಾಗಿರುತ್ತವೆ. ಸರ್ವೆ ನಂಬರ್‌ಗಳು ನನಗೆ ಗೊತ್ತಿರುತ್ತವೆ. ಅವು ಸರ್ವೆ ನಂಬರ್ 191 ಕ್ಕೆ 14 ಎಕರೆ, ಸರ್ವೇ ನಂಬರ್ 271 ಕ್ಕೆ 3 ಎಕರೆ ಮತ್ತು ಸರ್ವೇ ನಂಬರ್ 62 ಕ್ಕೆ 2 ಎಕರೆ ಜಮೀನು ಇರುತ್ತದೆ. ನನ್ನ ಅಜ್ಜನ ಹೆಸರಿನಲ್ಲಿರುವ ಈ ಮೂರು ಜಮೀನುಗಳಿಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಸರ್ವೇ ನಂಬರ್ 191 ಮೈಲಾರ ಗ್ರಾಮದ ಮೈಲಾರ ದೇವಸ್ಥಾನಕ್ಕೆ ಸೇರಿದ ಜಮೀನಾಗಿರುತ್ತದೆ ಎಂದರೆ ಸರಿ. ಈ ಜಮೀನನ್ನು ನನ್ನ ತಂದೆಯು ಸಾಗುವಳಿಯನ್ನು ಮಾಡಿಕೊಂಡು ಬರುತ್ತಿದ್ದರು ಅಂದರೆ ಸರಿ. ಅವರು ಈ ಜಮೀನಿಗೆ ಫಾರಂ ನಂಬರ್-7 ನ್ನು ಹಾಕಿರುತ್ತಾರೆ ಅಂದರೆ ಸರಿ. ಅದು ಎಲ್ . ಆರ್. ಎಮ್ ಕೇಸ್ ನಂ: 441/1975-76 ಆಗಿರುತ್ತದೆ ಎಂದರೆ ಸರಿ. ಈ ಪ್ರಕಾರವಾಗಿ ಜಂಭಣ್ಣನವರು ಸಾಗುವಳಿದಾರರು ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಈ ಜಮಿನೀನ ಆದೇಶವಾದ ಮೇಲೆ ಹರವಿ ಜಂಭಣ್ಣ ಎಂಬುವವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. 1981-82 ನೇ ಸಾಲಿನಲ್ಲಿಯೇ ಆದೇಶವಾಗಿ ಖಾತೆಯು ಸಹ ಅವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೇ 191 ಮೈಲಾರಲಿಂಗೇಶ್ವರ ದೇವಸ್ಥಾನದ ಆಸ್ತಿಯಾಗಿದ್ದು ಇದು ನನ್ನ ಪಿತ್ರಾರ್ಜಿತ ಆಸ್ತಿಯಲ್ಲ ಎಂದರೆ ಸರಿ. ಸರ್ವೇ 191 ರಲ್ಲಿ 14 ಎಕರೆ 03 ಸೆಂಟ್ಸ್‌ನಲ್ಲಿ 1995-96 ನೇ ಸಾಲಿನಲ್ಲಿ ಪಟ್ಟಾ ಆಧಾರದ ಮೇಲೆ ಹರವಿ ಜಂಭಣ್ಣ ಸಾಗುವಳಿಯನ್ನು ಮಾಡಿಕೊಂಡು ಬಂದಿರುತ್ತಾನೆ ಎಂದರೆ ಸರಿ.

ಸರ್ವೇ ನಂಬರ್ 62 ಸಿ ಜಮೀನು ಮತ್ತು 271/ಇ/3 ಜಮೀನುಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಈ ಆಸ್ತಿಯು ನನ್ನ ಅಜ್ಜನ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಜಮೀನುಗಳು 1974-75 ರಿಂದ ಹರವಿ ಜಂಭಣ್ಣನವರ ಹೆಸರಿನಲ್ಲಿ ಪಟ್ಟಾ ಇರುತ್ತದೆ ಎಂದರೆ ಸರಿ. ಅದು 1995-96 ನೇ ಸಾಲಿನಲ್ಲಿ ಅವರ ಸ್ವಾಧೀನದಲ್ಲಿತ್ತು ಎಂದರೆ ಸರಿ.

ನಾನು ಮೊದಲಿಂದಲೂ ಅಂದರೆ ನನ್ನ 16, 17 ವರ್ಷದಿಂದ ಹಮಾಲಿ ಕೆಲಸವನ್ನು ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿ (ಸಾಕ್ಷಿಯು ಮುಂದುವರೆದು ನಾನು ಕೂಲಿ ಕೆಲಸವನ್ನು ಕೂಡ ಮಾಡುತ್ತೇನೆ.) ನನ್ನ ಅಣ್ಣಂದಿರು ಸಹ ತಮ್ಮ ತಮ್ಮ ಕೂಲಿ ಕೆಲಸವನ್ನು ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಐದನೇ ಪ್ರತಿವಾದಿ ಮತ್ತು ನನ್ನ ತಂದೆ ಜಮೀನನ್ನು ನೋಡಿಕೊಂಡು ಬರುತ್ತಿದ್ದರು ಅಂದರೆ ಸರಿ. ದಿಃ15-11-1996 ರಂದು ನನ್ನ ತಂದೆ ಜಂಭಪ್ಪ ಪಾಲನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ಆ ಪ್ರಕಾರಕ್ಕೆ ಮುಟೇಷನ್ ಕೂಡ ಆಗಿರುತ್ತದೆ ಎಂದರೆ ನನ್ನ ತಂದೆಯು ಪಾಲು ಮಾಡಿ ಕೊಟ್ಟಿರುವುದಿಲ್ಲ ಸದ್ರಿ ದಾಖಲೆಗಳನೆಲ್ಲಾ ಇವರೇ ಹುಟ್ಟಿಸಿಕೊಂಡಿರುತ್ತಾರೆ. ನನ್ನ ತಂದೆಯು 7 ಭಾಗವನ್ನು ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಒಂದನೇ ಭಾಗ 191 ಪಿ ಐದು ಎಕರೆ ಮೂರು ಸೆಂಟ್ಸ್ ನನ್ನ ತಂದಗೆ ಬದಿರುತ್ತದೆ. ಆದೇ ರೀತಿ ನನ್ನ ಅಕ್ಕನಾದ ಅಕ್ಕಮನಿಗೆ ಆರನೇ ಭಾಗ 2 ಎಕರೆ 191 ಸೆಂಟ್ಸ್ ಬಂದಿರುತ್ತದೆ ಹಾಗೂ ಏಳನೇ ಭಾಗ ಐದನೇ ಪ್ರತಿವಾದಿಗೆ 191 ರಲ್ಲಿ 7 ಎಕರೆ ಬಂದಿರುತ್ತದೆ.

ಎರಡನೇ ಭಾಗವಾಗಿ ಸರ್ವೇ 62 ಸಿ ಯಲ್ಲಿ 1 ಎಕರೆ ಎರಡನೇ ಪ್ರತಿವಾದಿಗೆ, ಮೂರನೇ ಭಾಗವಾಗಿ ಎರಡನೇ ಪ್ರತಿವಾದಿಗೆ, 271ಬಿ/3 ರಲ್ಲಿ 1 ಎಕರೆ ಜಮೀನನ್ನು, ನಾಲ್ಕನೇ ಭಾಗವಾಗಿ ಮೂರನೇ ಪ್ರತಿವಾದಿಗೆ ಸರ್ವೇ 271ಬಿ/3 ರಲ್ಲಿ 67 ಸೆಂಟ್ಸ್ ಜಮೀನು ಮತ್ತು ಸರ್ವೇ ನಂಃ 62 ಸಿ ಯಲ್ಲಿ 32 ಸೆಂಟ್ಸ್ ಜಮೀನನ್ನು ಆದೇ ರೀತಿ ನನಗೆ 271ಇ/03 ರಲ್ಲಿ 1 ಎಕರೆ ಜಮೀನನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ನಾನು ಕೂಲಿ ಕೆಲಸವನ್ನು ಮಾಡುತ್ತೇನೆ ನನ್ನ ತಂದೆಯು ಯಾವುದೇ ಪಾಲುಪಟ್ಟಿಯನ್ನು ಬರೆದುಕೊಟ್ಟಿರುವುದಿಲ್ಲಾ ಸದ್ರಿ ವಿಭಾಗವಾಗಿದೆಂದು ಮೋಸದಿಂದ ಮಾಡಿಕೊಂಡಿರುತ್ತಾರ್ತೆ ಎಲ್ಲಾ ಸೃಷ್ಟಿ ಮಾಡಿರುತ್ತಾರೆ. ಸದ್ರಿ ಮೇಲ್ಕಂಡ ಪಾಲನ್ನು ನನ್ನ ತಂದೆ ಹರವಿ ಜಂಭಣ್ಣನವರು ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ (ಸಾಕ್ಷಿಯು ಪುನಃ ಮುಂದುವರೆದು ಆತನು ಹುಚ್ಚನಾಗಿದ್ದ.) ಸದ್ರಿ ಪಾಲುಪಟ್ಟಿಯ ಆಧಾರದ ಮೇಲೆ ಮುಟೇಷನ್ ಕೂಡ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಕಿರುವ ಪಹಣಿ

ಪತ್ರಿಕೆಯಲ್ಲೂ ಸಹ ಪಾಲು ಪಟ್ಟಿಯ ಪ್ರಕಾರ 1997-98 ನೇ ಇಸವಿಯಲ್ಲಿ ಪಾಲು ವಿಭಾಗ ಆಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಯಾರ್‍ಯಾರ ಭಾಗಕ್ಕೆ ಏನೇನೂ ಬಂದಿರುತ್ತದೆ ಅದೇ ಪ್ರಕಾರವಾಗಿ ಮುಟೇಷನ್ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಪಹಣಿ ಪತ್ರವನ್ನು ಈಗಾಗಲೇ ಹಾಜರುಪಡಿಸಿದ್ದು ಅವುಗಳನ್ನು ನಾನು ನೋಡಿಯೇ ಹಾಕಿರುತ್ತೇನೆ. ಇದರ ಬಗ್ಗೆ ನಾನು ವಾದ ಪತ್ರದಲ್ಲಿ ಕಾಣಿಸಿರುವುದಿಲ್ಲಾ. ಸರ್ವೇ 191 14 ಎಕರೆ 03 ಸೆಂಟ್ಸ್ ಜಮೀನು ಮೈಲಾರಲಿಂಗೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಸೇರಿದ್ದು ಎಂದು ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲಾ ಆದರೆ ಅದು ನನ್ನ ತಂದೆಗೆ ಸೇರಿದ್ದು ಎಂದು ನಾನು ನಮೂದು ಮಾಡಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಕೋರಿದ್ದರಿಂದ ಅನುಮತಿಯ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.